# ಕರ್ನಾಟಕ ಪಶುವೈದ್ಯಕೀಯ ಪರಿಷತ್ತು
# KARNATAKA VETERINARY COUNCIL
(Constituted Under Indian Veterinary Council Act 1984)
Veterinary College Campus, Hebbal, Bengaluru - 560 024 Ph: 080-2351 6740
Email: kvc.bangalore@gmail.com, website: www.kvcbangalore.com


ಸಂ:ನಿ:ಕಪಪ:ಚುನಾವಣೆ:2020-21/109 ದಿನಾಂಕ:09.09.2020

**ಅತಿ ಜರೂರು**

**ಸುತ್ತೋಲೆ**

**ವಿಷಯ:** ಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನಲ್ಲಿ ನೊಂದಣಿಯಾದ ಎಲ್ಲಾ ಪಶುವೈದ್ಯರು ತಮ್ಮ ವೈಯಕ್ತಿಕ ಮಾಹಿತಿಯನ್ನು ತಿದ್ದು ಪಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿರುವ ಕುರಿತು

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನಲ್ಲಿ ನೊಂದಣಿಯಾಗಿರುವ ಎಲ್ಲಾ ಪಶುವೈದ್ಯರುಗಳ ಚಾಲ್ತಿಯಲ್ಲಿರುವ ತಮ್ಮ ವೈಯಕ್ತಿಕ ಮಾಹಿತಿಯನ್ನು ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ ತಂತ್ರಾಂಶ ರೂಪಿಸಲಾಗಿರುತ್ತದೆ. ಪರಿಷತ್‌ನ ಜಾಲತಾಣ (website:www.kvcbangalore.com)ದಲ್ಲಿ ಲಭ್ಯವಿರುವ ಲಿಂಕ್‌ನಲ್ಲಿ (http://kvc.kar.nic.in) ಕ್ಲಿಕ್ ಮಾಡಿ ತಮ್ಮ ವೈಯಕ್ತಿಕ ಮಾಹಿತಿಯನ್ನು ಪರಿಶೀಲಿಸುವುದು. ಅವಶ್ಯಕತೆ ಇದ್ದಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಅವಕಾಶವಿರುತ್ತದೆ. ಕಡ್ಡಾಯವಾಗಿ ಪ್ರತಿ RVP ತಮ್ಮ ಚಾಲ್ತಿ ಮೊಬೈಲ್ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ಇಂದೀಕರಿಸಲು ಸೂಚಿಸಿದೆ. ಚಾಲ್ತಿ ವಿಳಾಸವನ್ನು ಸಹ ದಾಖಲಿಸಿ Update ಬಟನ್ ಕ್ಲಿಕ್ ಮಾಡಿದರೆ ತಾವು ದಾಖಲಿಸಿರುವ ಇ-ಮೇಲ್ ವಿಳಾಸಕ್ಕೆ OTP ಬರುವುದು. ಸದರಿ OTPಯನ್ನು ನಮೂದಿಸಿ Update ಮಾಡುವುದು. ಈ ರೀತಿ ತಿದ್ದುಪಡಿ ಮಾಡಿಕೊಳ್ಳಲು ಒಂದು ದಿನದಲ್ಲಿ ಒಮ್ಮೆ ಮಾತ್ರ ಅವಕಾಶವಿರುತ್ತದೆ. ಒಂದು ವೇಳೆ ತಮ್ಮ Status Inactive ಎಂದು ತೋರಿಸಿದಲ್ಲಿ ತುರ್ತಾಗಿ KVC ಕಛೇರಿಗೆ ಸಂಪರ್ಕಿಸಿ ವಿವರಣೆ ಪಡೆಯಬಹುದಾಗಿದೆ.

ನೊಂದಣಿ ನವೀಕರಣವಾಗದೇ ಇದ್ದ ಪಕ್ಷದಲ್ಲಿ Inactive ಎಂದು ತೋರಿಸುತ್ತದೆ. ಆದುದರಿಂದ ತಕ್ಷಣ ಅಂದರೆ 30.09.2020ರ ಒಳಗಾಗಿ ನವೀಕರಣ ಮಾಡಿಕೊಳ್ಳಲು ಕ್ರಮವಹಿಸುವುದು ಎಂದು ಈ ಮೂಲಕ ಎಲ್ಲಾ ಪಶುವೈದ್ಯರಲ್ಲಿ ತಿಳಿಯಪಡಿಸಿದೆ. ಯಾವುದೇ ಮಾಹಿತಿ ಪಡೆಯಲು ಈ ಕೆಳಕಂಡ ದೂರವಾಣಿ ಮತ್ತು ಇ-ಮೇಲ್ ಮೂಲಕ ಸಂಪರ್ಕಿಸಲು ವಿನಂತಿಸಿದೆ.

**ದೂರವಾಣಿ:080-23516740**

**ಇ-ಮೇಲ್ : kvc.bangalore@gmail.com**

ನಿಬಂಧಕರು

**ಪ್ರತಿಯನ್ನು:**-ಕಛೇರಿಗಳ ಪ್ರಕಟನಾ ಫಲಕಗಳಲ್ಲಿ ಪ್ರಕಟಿಸಲು ಹಾಗೂ ತಮ್ಮ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಪಶುವೈದ್ಯರುಗಳ ಗಮನಕ್ಕೆ ತರಲು ಕೋರಿ ಸಲ್ಲಿಸಿದೆ.

1. ಮಾನ್ಯ ಆಯುಕ್ತರು. ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆ. ಬೆಂಗಳೂರು.
2. ಮಾನ್ಯ ನಿರ್ದೇಶಕರು. ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆ. ಬೆಂಗಳೂರು.
3. ಅಧ್ಯಕ್ಷರು. ಕರ್ನಾಟಕ ಪಶುವೈದ್ಯಕೀಯ ಪರಿಷತ್ತು. ಹೆಬ್ಬಾಳ ಬೆಂಗಳೂರು
4. ನಿಬಂಧಕರು. ಕರ್ನಾಟಕ ಪಶುವೈದ್ಯಕೀಯ. ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ. ಬೀದರ್.
5. ನಿರ್ದೇಶಕರು. ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ. ಹೆಬ್ಬಾಳ. ಬೆಂಗಳೂರು
6. ನಿರ್ದೇಶಕರು (ಪಶುಸಂಗೋಪನೆ). ಕರ್ನಾಟಕ ಹಾಲು ಒಕ್ಕೂಟಗಳ ಮಹಾಮಂಡಳ ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು ಎಲ್ಲಾ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟಗಳು
8. ಡೀನ್. ಪಶುವೈದ್ಯಕೀಯ ಮಹಾವಿದ್ಯಾಲಯ. ಬೆಂಗಳೂರು. ಬೀದರ್. ಶಿವಮೊಗ್ಗ. ಹಾಸನ ಮತ್ತು ಗದಗ
9. ಅಧ್ಯಕ್ಷರು/ ಕಾರ್ಯದರ್ಶಿಗಳು. ಕರ್ನಾಟಕ ಪಶುವೈದ್ಯಕೀಯ ಸಂಘ. 8ನೇ ಅಡ್ಡ ರಸ್ತೆ. ಮಲ್ಲೇಶ್ವರಂ ಬೆಂಗಳೂರು
10. ವ್ಯವಸ್ಥಾಪಕ ನಿರ್ದೇಶಕರು.ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ. ಹೆಬ್ಬಾಳ.ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ಸಹಕಾರ ಕುಕ್ಕುಟ ಮಂಡಳಿ.ನಿ.ಕ್ವೀನ್ಸ್ ರಸ್ತೆ. ಬೆಂಗಳೂರು.
12. ಎಲ್ಲಾ 30 ಜಿಲ್ಲಾ ಉಪನಿರ್ದೇಶಕರುಗಳು (ಆಡಳಿತ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
13. ಉಪ ನಿರ್ದೇಶಕರು. ಇಲಾಖೆಯ ಎಲ್ಲಾ ತರಬೇತಿ ಕೇಂದ್ರಗಳು.
14. ಎಲ್ಲಾ 30 ಜಿಲ್ಲಾ ಉಪನಿರ್ದೇಶಕರುಗಳು(ಆಡಳಿತ). ಜಿಲ್ಲಾ ಪಾಲಿಕ್ಲಿನಿಕ್ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
15. ಎಲ್ಲಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರುಗಳು. ಪಶುಪಾಲನಾ ಮತ್ತು ಪಶುವೈದ್ಯಸೇವಾ ಇಲಾಖೆ
16. ಕ್ಷೇತ್ರಾಧಿಕಾರಿಗಳು. ಎಲ್ಲಾಜಾನುವಾರು ಸಂವರ್ಧನಾ ಕೇಂದ್ರಗಳು. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ.
17. ಅಧ್ಯಕ್ಷರು/ ಕಾರ್ಯದರ್ಶಿಗಳು. ಕರ್ನಾಟಕ ಪಶುವೈದ್ಯಕೀಯ ಸಂಘ. 8ನೇ ಅಡ್ಡ ರಸ್ತೆ. ಮಲ್ಲೇಶ್ವರಂ ಬೆಂಗಳೂರು
18. President, Pet practioners association of Karnataka(PPAK)
19. ಹಿರಿಯ ಪಶುವೈದ್ಯರ ಸಂಘ. 8ನೇ ಅಡ್ಡರಸ್ತೆ. ಮಲ್ಲೇಶ್ವರಂ. ಬೆಂಗಳೂರು
20. ಸದಸ್ಯರುಗಳು ಕರ್ನಾಟಕ ಪಶುವೈದ್ಯಕೀಯ ಪರಿಷತ್ತು. ಹೆಬ್ಬಾಳ ಬೆಂಗಳೂರು

ನಿಬಂಧಕರು